ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ ೧೦ ಭೂದಾಖ ೨೦೦೨.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ ೧೮.೩.೨೦೦೨.

## ಸುತ್ತೋಲೆ

ರಾಜ್ಯದಲ್ಲಿ ಪೋಡಿ ಪ್ರಕರಣಗಳ ದುರಸ್ತಿ ಬಗ್ಗೆ ಒಂದು ಸರ್ವೆ ನಂಬರಿನ ಪೋಡಿ ಕೆಲಸಕ್ಕೆ ಕಡತಗಳನ್ನು ಕಳುಹಿಸುವ ಸಂದರ್ಭದಲ್ಲಿ ಸದರಿ ಸರ್ವೆ ನಂಬರಿನಲ್ಲಿ ಸಾಹುಕಾರರು ಜನ ಹಿಸ್ಸಾದಾರರಿದ್ದರೂ ಕೂಡ ತತ್ಸಮಯದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಹಕ್ಕುದಾರರ ಎಂ.ಆರ್. ಗಳನ್ನು ಕಳುಹಿಸುತ್ತಿರುತ್ತಾರೆ. ಸ್ಥಳದಲ್ಲಿ ಅಳತೆಯ ಸಮಯದಲ್ಲಿ ಅನುಬಂಧ ಗಡಿಗಳ ಬಗ್ಗೆಯಾಗಲಿ, ವಿಸ್ತೀರ್ಣದ ಬಗ್ಗೆಯಾಗಲಿ, ಸಂಶಯ ಬಂದಾಗ ಉಳಿದ ಹಕ್ಕುದಾರರ ರೆಕಾರ್ಡುಗಳು ಲಭ್ಯವಿಲ್ಲದ ಕಾರಣ ಸ್ಥಳದಲ್ಲಿ ಸಿಗುವ ಮಾಹಿತಿಗಳಂತೆ ಅಳತೆ ಮಾಡಿ ರೆಕಾರ್ಡ್ ಗಳನ್ನು ದುರಸ್ತಿ ಮಾಡಬೇಕಾದ ಪರಿಸ್ಥಿತಿ ಉದ್ಭವವಾಗುತ್ತದೆ. ಇದರಿಂದ ಅನೇಕ ಸಮಸ್ಯೆಗಳು ಉಂಟಾಗಿ ಮೇಲ್ಮನವಿಗಳಿಗೂ ಸಹ ಎಡೆ ಮಾಡಿಕೊಡುವಂತಾಗುತ್ತದೆ.

ಆದ ಕಾರಣ, ಪೋಡಿ ಪ್ರಕರಣಗಳನ್ನು ಪೋಡಿ ಕೆಲಸಕ್ಕೆ ಕಳುಹಿಸುವ ಸಂದರ್ಭದಲ್ಲಿ ಪ್ರಕರಣದ ಜೊತೆಗೆ ಸದರಿ ಸರ್ವೆ ನಂಬರಿನಲ್ಲಿರುವ ಎಲ್ಲಾ ಹಕ್ಕುದಾರರ ಎಂ.ಆರ್. ಹಾಗೂ ಪಹಣಿ ಪ್ರತಿಗಳನ್ನು ಏಕ ಕಾಲದಲ್ಲಿ ಕಳುಹಿಸಿದರೆ ಮೇಲಿನ ಸಮಸ್ಯೆ ಉಂಟಾಗಲಾರದು.

ಆದ್ದರಿಂದ, ಪೋಡಿ ಕೆಲಸಗಳಿಗೆ ಕಡತಗಳನ್ನು ಕಳುಹಿಸುವ ಸಂದರ್ಭದಲ್ಲಿ ಪ್ರಕರಣಗಳ ಜೊತೆಗೆ ಸದರಿ ಸರ್ವೆ ನಂಬರುಗಳಲ್ಲಿರುವ ಎಲ್ಲಾ ಹಕ್ಕುದಾರರ ಎಂ.ಆರ್. ಹಾಗೂ ಪಹಣಿ ಕಾಪಿಗಳನ್ನು ಸಂಬಂಧಪಟ್ಟ ಭೂದಾಖಲೆಗಳ ಸಹಾಯಕ ನಿರ್ದೇಶಕರವರಿಗೆ ಏಕ ಕಾಲದಲ್ಲಿ ಕಳುಹಿಸುವ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ತಹಸೀಲ್ದಾರ್ ರವರಿಗೆ ಸೂಚನೆ ನೀಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳನ್ನು ಕೋರಿದೆ.

(ಸಹಿ)
(ಚಿಕ್ಕದ ಸುಬ್ಬಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ.

ಬೆಂಗಳೂರು, ದಿನಾಂಕ ೩೦.೩.೨೦೦೨.

ಸಂಖ್ಯೆ: ತಾಂ:ಅ.೧೪:೨೦೦೧-೨೦೦೨.

ಸರ್ಕಾರದ ಸುತ್ತೋಲೆಯಂತೆ ಕಂದಾಯ ಇಲಾಖೆಯಿಂದ ಪೋಡಿ ಕೆಲಸಕ್ಕೆ ಕಳುಹಿಸುವ ಪೋಡಿ ಪ್ರಕರಣಗಳಲ್ಲಿ ಅಲ್ಲಿಗೆ ಅವಶ್ಯಕವಿರುವ ದಾಖಲೆಗಳನ್ನು ಪರಿಶೀಲಿಸಿ ಅಗತ್ಯವಾದಲ್ಲಿ ದಾಖಲೆಗಳನ್ನು ಪಡೆದುಕೊಂಡು ಪೋಡಿ ಪ್ರಕರಣಗಳಲ್ಲಿ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

ಯಥಾ ಪ್ರತಿಯನ್ನು:—

(೧) ಎಲ್ಲಾ ಭೂದಾಖಲೆಗಳ ಜಂಟಿ ನಿರ್ದೇಶಕರುಗಳಿಗೆ ಮುಂದಿನ ಕ್ರಮಕ್ಕಾಗಿ.
(೨) ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ನಗರ ಮಾಪನ ಸೇರಿ ಮುಂದಿನ ಕ್ರಮಕ್ಕಾಗಿ.
(೩) ಎಲ್ಲಾ ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳಿಗೆ ನಗರ ಮಾಪನ ಸೇರಿ ಮುಂದಿನ ಕ್ರಮಕ್ಕಾಗಿ.
(೪) ಎಲ್ಲಾ ತಾಲ್ಲೂಕು ಭೂಮಾಪನಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ನಿರ್ದೇಶಕರ ಪರವಾಗಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.